೩) ಶ್ರೀ ಹೆಚ್. ಭಾಸ್ಕರ್, ಜಿಲ್ಲಾಧಿಕಾರಿ, ಕೊಡಗು

೪) ಶ್ರೀಮತಿ ರತ್ನಪ್ರಭ, ಕೆ. ಜಿಲ್ಲಾಧಿಕಾರಿ, ರಾಯಚೂರು

೫) ಶ್ರೀ ಬಿ. ಡಿ. ಕೇಲಂ, ಜಿಲ್ಲಾಧಿಕಾರಿ, ಮಂಡ್ಯ

೬) ಶ್ರೀ ಬಿ, ಆರ್. ಪೆರುಮಾಳ್, ಜಿಲ್ಲಾಧಿಕಾರಿ, ತುಮಕೂರು.

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ನನ್ನ ೧೬ನೇ ಪ್ರಶ್ನೆಗೆ ಉತ್ತರವನ್ನು ಒದಗಿಸಲಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಪ್ರೊ. ಎಂ, ಡಿ. ನಂಜುಂಡಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ವೆಂಕಟೇಶ್ ರವರಲ್ಲಿ ಕೇಳಿಕೊಂಡಿದ್ದೇನೆ. ಇಲ್ಲಿ ಬಹಳ ಮುಖ್ಯವಾದ ವಿಷಯದ ಬಗ್ಗೆ ಅಂದರೆ ಈ ಲಾಕಪ್ ಸಾವುಗಳ ಬಗ್ಗೆ ಮಾತನಾಡುತ್ತಾ ಇದ್ದೇವೆ.

ಅಧ್ಯಕ್ಷರು.—ಗೃಹಖಾತೆಗಳ ಡಿಮ್ಯಾಂಡ್ ಬರುತ್ತದೆ. ಆಗ ಎಲ್ಲಾ ವಿಚಾರವನ್ನು ಕೂಡ ಹೇಳಬಹುದು. ಈಗಾಗಲೇ ಮಾನ್ಯ ಸದಸ್ಯರಾದ ಶ್ರೀ ವೆಂಕಟೇಶ್‌ರವರು ಪ್ರಶ್ನೆಯನ್ನು ಕೇಳಿ ಬಿಟ್ಟಿದ್ದಾರೆ. I cannot go back to the previous question

ಶ್ರೀ ಎಂ. ಪಿ. ವೆಂಕಟೇಶ್.—ಮಾನ್ಯ ಅಧ್ಯಕ್ಷರೇ, ಆರು ಜನ ಜಿಲ್ಲಾಧಿಕಾರಿಗಳನ್ನು ಹಾಕಿದ್ದೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅವಕ್ಕಾಗಿ ನಾನು ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪರಿಶಿಷ್ಟ ಜಾತಿಗೆ ಸೇರಿದ ಐ.ಪಿ.ಎಸ್. ಅಧಿಕಾರಿಗಳು ಎಷ್ಟು ಜನ ಇದ್ದಾರೆ ಎಂದು ಪ್ರಶ್ನೆ ಹಾಕಿದ್ದಕ್ಕೆ ೧೩ ಜನರು ಎಂದು ಉತ್ತರವನ್ನು ಕೊಟ್ಟಿದ್ದಾರೆ ಎಷ್ಟು ಜನ ಪ್ರೋಲೀಸ್ ಅಧಿಕಾರಿಗಳನ್ನು ಹಾಕಿದ್ದೀರಿ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದಾರೆ. ಪರಿಶಿಷ್ಟ ಜಾತಿಯವರಿಗೆ ರಕ್ಷಣೆಯನ್ನು ಒದಗಿಸಬೇಕು ಎಂದು ಸರ್ಕಾರ ಹೇಳುತ್ತದೆ. ಇಡೀ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಐ.ಪಿ.ಎಸ್. ಅಧಿಕಾರಿಗಳು ಇದ್ದರೂ ಕೂಡಾ ಸರ್ಕಾರ ಒಬ್ಬ ಎಸ್.ಪಿ.ಯನ್ನು ಕೂಡಾ ಹಾಕಿಲ್ಲ ಎಂದು ಹೇಳಿದರೆ ಪರಿಶಿಷ್ಟ ಜಾತಿಯವರಿಗೆ ಹೇಗೆ ರಕ್ಷಣೆ ಸಿಗುತ್ತದೆ ಎಂದು ತಾವು ಯೋಚನೆ ಮಾಡಬೇಕು.

ಇವುಗಳ ಎಷ್ಟರ ಮಟ್ಟಿಗೆ ಪರಿಶಿಷ್ಟ ಜಾತಿ ಅಧಿಕಾರಿಗಳ ಬಗ್ಗೆ ಹಾಗೂ ಪರಿಶಿಷ್ಟ ಜಾತಿಯವರ ಬಗ್ಗೆ ಕಾಳಜಿ ಇದೆ ಎಂದು ಇದರಿಂದ ಗೊತ್ತಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇವರ ಬಗ್ಗೆ ಉತ್ತರ ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಪ್ರಶ್ನೆ ಕೇಳಿದ್ದು ಐ.ಎ.ಎಸ್ ಆಫೀಸರ್ಸ್ ಬಗ್ಗೆ. ಆದರೆ ಮಾನ್ಯ ಸದಸ್ಯರು ಸಪ್ಲಿಮೆಂಟರಿ ಕೇಳುತ್ತಾ ಇರುವುದು ಐ.ಪಿ.ಎಸ್. ಆಫೀಸರ್ಸ್ ಬಗ್ಗೆ.

ಅಧ್ಯಕ್ಷರು.—ಐ ಎ ಎಸ್ ಆಫೀಸರ್ಸ್ ಬಗ್ಗೆ ತಾವು ಹೇಳಿದ ಉತ್ತರಕ್ಕೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಆದ್ದರಿಂದ ಅವರಿಗೆ ಉತ್ತರ ಸಿಕ್ಕಿತು ಎಂದಾಯಿತು....ಶ್ರೀ ಕುಶಾಲ ಅವರ ಪ್ರಶ್ನೆ...

ಶ್ರೀ ಎಂ. ಪಿ. ವೆಂಕಟೇಶ್.—ಪ್ರಶ್ನೆ ಸಂಖ್ಯೆ ೧೬ರ ಪ್ರಶ್ನೆಗೆ ಉತ್ತರದಲ್ಲಿ ಇಲ್ಲ ಎಂದು ಇದೆ. ಅದನ್ನು ನಾನು ತಪ್ಪು ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವೀರೇಂದ್ರ ಪಾಟೀಲ್.—ಐ.ಪಿ.ಎಸ್. ಆಫೀಸರ್ಸ್ ಬಗ್ಗೆ ತಾವು ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದ್ದೀರೆಂದು ನನಗೆ ನೆನಪು ಇದೆ. ಆದರೆ ಇವೊತ್ತು ಅದಕ್ಕೆ ಉತ್ತರ ಬಂದಿಲ್ಲ. ಅದಕ್ಕೆ ಯಾವ ದಿವಸ ಉತ್ತರ ಬರುತ್ತದೆ, ಆ ದಿವಸ ಸಪ್ಲಿಮೆಂಟರಿ ಉತ್ತರವನ್ನೂ ಒದಗಿಸುತ್ತೇನೆ. ಆಗ ತಾವು ಕೇಳುವ ಎಲ್ಲಾ ಪ್ರಶ್ನೆಗಳಿಗೆ ಉತ್ತರ ನೀಡುತ್ತೇನೆ.

ಬಡ್ತಿ ಹೊಂದುವ ಹುದ್ದೆಗಳಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರಿಗೆ ಕಾದಿರಿಸಿರುವ ಹುದ್ದೆಗಳು

೧೩. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಸರ್ಕಾರದ ಸಚಿವಾಲಯ ಅಧೀನ ಕಾರ್ಯದರ್ಶಿಗಳ ಶಾಖಾಧಿಕಾರಿಗಳ ಮತ್ತು ಹಿರಿಯ ಸಹಾಯಕರುಗಳ ಹುದ್ದೆಗಳ ಸಂಖ್ಯೆ ಎಷ್ಟು ಮತ್ತು ಈ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಖ್ಯೆ ಎಷ್ಟು ? (ವರ್ಗವಾರು ಮತ್ತು ಜಾತೀವಾರು ವಿವರ ನೀಡುವುದು)

ಅ. ೧೯೮೩ರಲ್ಲಿ ಸರ್ಕಾರಿ ಅಧಿಕೃತ ಜ್ಞಾಪನ ಸಂಖ್ಯೆ/ಪಿ�ಎಸ್‌ಇ/೧೨೬ ಎಸ್‌ಇಆರ್/೮೨ ದಿನಾಂಕ ೨೬-೧೧-೮೨ರ ನಿಬಂಧನೆಗಳನ್ನು ಅನುಸರಿಸದೆ ೧೦೯ ಹಿರಿಯ ಸಹಾಯಕರ ಹುದ್ದೆಗಳನ್ನು ಭರ್ತಿ ಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ. ಹಾಗಿದ್ದಲ್ಲಿ ಸರ್ಕಾರವು ಈ ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ವಾಪಸ್ಸು ಪಡೆಯಲು ಮತ್ತು ಸರಿದೂಗಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳುವುದೇ ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು):- .

ಅ)	ಒಟ್ಟು ಹುದ್ದೆಗಳು	ಪರಿಶಿಷ್ಟ ಜಾತಿ	ಪರಿಶಿಷ್ಟ ವರ್ಗ
ಅಧೀನ ಕಾರ್ಯದರ್ಶಿಗಳು	೧೨೩	೨೫	೦೩
ಶಾಖಾಧಿಕಾರಿಗಳು	೨೪೨	೩೭	೦೨
ಹಿರಿಯ ಸಹಾಯಕರು	೩೦೩	೨೨	೦೫

ಆ) ದಿನಾಂಕ ೨೬-೧೧-೮೨ರಲ್ಲಿನ ಅಧಿಕೃತ ಜ್ಞಾಪನದಲ್ಲಿ ಮುಂಬಡ್ತಿ ನೀಡುವ ಬಗೆಗಿನ ಕನಿಷ್ಟ ಅರ್ಹತಾ ಸೇವೆಯ ಬಗ್ಗೆ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ ಸೂಚನೆಗಳನ್ನು ಮಾತ್ರ ನೀಡಲಾಗಿದೆ. ಆದರೆ ನಿಯಮಗಳಿಗೆ ಮಾರ್ಚ್ ೮೪ರಲ್ಲಿ ದಿನಾಂಕ ೭-೬-೮೪ ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲಾಯಿತು. ಆದುದರಿಂದ ೧೯೮೩ರಲ್ಲಿ ಮುಂಬಡ್ತಿ ನೀಡಿದಾಗ ದಿನಾಂಕ ೨೬-೧೧-೮೨ರ ಅಧಿಕೃತ ಜ್ಞಾಪನವನ್ನು ಪಾಲಿಸಲು ಸಾಧ್ಯವಾಗಲಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಕೆ. ಕುಶಾಲ.:- ಮಾನ್ಯ ಅಧ್ಯಕ್ಷರೇ, ೧೯೮೩ನೇ ಇಸವಿಯಲ್ಲಿ ವಿಧಾನ ಸೌಧದ ಕಛೇರಿಯಲ್ಲಿರುವಂತಹ ಅಧಿಕಾರಿಗಳಿಗೆ ಬಡ್ತಿ ಕೊಡಬೇಕೆಂಬ ಆದೇಶವನ್ನು ಹೊರಡಿಸಲಾಗಿದೆ. ಆ ಪ್ರಕಾರ ನೀಡಿದಂತಹ ಸಾಧಾರಣವಾಗಿ ಎಲ್ಲಾ ಜಾತಿಯವರನ್ನೂ ಸೇರಿಸಿ, ೧೮೮ ಜನ ಅಧಿಕಾರಿಗಳಿಗೆ ನೀಡಿದಂತಹ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿಯ ೩೨ ಜನರಿಗೆ ಹಾಗೂ ಅದೇ ರೀತಿ ಪರಿಶಿಷ್ಟ ಪಂಗಡದ ೭ ಜನರಿಗೆ ಬಡ್ತಿ ಲಭಿಸಬೇಕಾಗಿತ್ತು. ಆದರೆ ದುರ್ದೈವವಶಾತ್ ಮಾನ್ಯ ಸಚಿವರಾದ ಮೊಯಿಲಿಯವರು ಹೇಳಿದ ಹಾಗೆ ಸರ್ಕಾರದ ಗಮನಕ್ಕೆ ಇದನ್ನು ತಂದಾಗ ಈ ಒಂದು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗದಿದ್ದ ಕಾರಣ ೧೫೫ ಮಂದಿ ಪರಿಶಿಷ್ಟ ಜಾತಿ ಹಾಗೂ ೬ ಮಂದಿ ಪರಿಶಿಷ್ಟ ಪಂಗಡದವರಿಗೆ ಇದರಿಂದ ವಂಚನೆ ಆಗಿದೆ ಎಂದು ತಿಳಿದು ಬರುತ್ತದೆ. ಆದೇ ರೀತಿಯಲ್ಲಿ ೧೯೮೨ನೇ ಇಸವಿಯ ತಿದ್ದುಪಡಿಗೆ ಪುನಃ ೧೯೮೪ರಲ್ಲಿ ಮತ್ತೆ ತಿದ್ದುಪಡಿ ತಂದಿದ್ದಾರೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಈ ತಿದ್ದುಪಡಿಯ ಪ್ರಕಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.:- ನಾನು ಏನು ಉತ್ತರ ಒದಗಿಸಿದ್ದೇನೆ, ಅದರಲ್ಲಿ ಅಂಡರ್ ಸೆಕ್ರೆಟರಿಗಳಲ್ಲಿ ಶೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ಟ್ರೈಬ್ ಸಾಕಷ್ಟು ಪೋಟಾ ಇದೆ. ಸೆಕ್ಷನ್ ಆಫೀಸರ್‌ನಲ್ಲಿ ಕೂಡ ಸಾಕಷ್ಟು ಶೆಡ್ಯೂಲ್ ಕ್ಯಾಸ್ಟ್ ಹಾಗೂ ಟ್ರೈಬ್ ಪೋಟಾ ಇದೆ. ಈಗ ಕಡಿಮೆ ಇರುವಂತಹದ್ದು ಕೇವಲ ಸೀನಿಯರ್ ಅಸಿಸ್ಟೆಂಟ್‌ಗಳಲ್ಲಿ ಮಾತ್ರ. ಪರಿಸ್ಥಿತಿ ಏನು ಇತ್ತು ಎಂದರೆ ಸೀನಿಯರ್ ಅಸಿಸ್ಟೆಂಟ್‌ಗಳಿಂದ ಸೆಕ್ಷನ್ ಆಫೀಸರ್‌ಗೆ ಪ್ರಮೋಷನ್ ಆಗುವುದು ಆ ವೇಳೆಗೆ ರೂಲ್ಸ್‌ನಲ್ಲಿ ೫ ಪರ್ಸೆಂಟೇಜ್ಸ್‌ನಷ್ಟು ಅದವರಿಗೆ ಪ್ರೊಮೋಷನ್ ಕೊಡಬಹುದು ಎಂದು ಇದ್ದಿದ್ದರಿಂದ ಅನೇಕರು ಅರ್ಹತೆ ಪಡೆಯಲಾರದೆ, ಪ್ರೊಮೋಷನ್ ಅವರಿಗೆ ಸಿಗುತ್ತಾ ಇರಲಿಲ್ಲ. ಇದನ್ನು ಮನಗಂಡು ೧೯೮೨ರಲ್ಲಿ ಒಂದು ಆಫೀಸ್ ಮೆಮೋರಾಂಡಮ್‌ನ್ನು ಹೊರಡಿಸಿದ್ದೇವೆಯೇ ಹೊರತು ರೂಲ್ಸ್ ಅಮೆಂಡ್ ಮಾಡಲಿಲ್ಲ. ಆಫೀಸ್ ಮೆಮೋರಾಂಡಮ್ ಹೊರಡಿಸಿ ರೂಲ್ಸ್ ಅಮೆಂಡ್ ಮಾಡುವುದರಲ್ಲಿ ಎರಡು ವರ್ಷ ಆಯಿತು. ಅದು ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್‌ನ ಮುಂದೆ ಹೋದಾಗ, ಅವರು ಏನು ಹೇಳಿದರು ಅಂದರೆ ಬರೀ ಆಫೀಸ್ ಮೆಮೋರಾಂಡಮ್ ಮೇಲೆ ಪ್ರೊಮೋಷನ್ ಕೊಡುವುದಕ್ಕಾಗುವುದಿಲ್ಲ ಎಂದು. ಯಾವ ದಿವಸ ರೂಲ್ಸ್ ಅಮೆಂಡ್ ಆಗಿದೆ ಆ ದಿವಸ ಪ್ರೊಮೋಷನ್ ಕೊಡಬಹುದು ಎಂದು ಹೇಳಿರುವುದರಿಂದ ಈ ರೀತಿ ಆಗಿದೆ. ೧೯೮೪ರಿಂದ ಪ್ರೊಮೋಷನ್ ಕೊಡುವುದಕ್ಕೆ ಮೂರು ವರ್ಷ ಎಂದು ರೂಲ್ಸ್‌ನಲ್ಲಿ ಅಮೆಂಡ್ ಮಾಡಿ, ಈಗ ಮೂರು ವರ್ಷ ಎಕ್ಸ್‌ಪೀರಿಯನ್ಸ್ ಇದ್ದರೆ ಸಾಕು ಎಂದು ಕರ್ನಾಟಕ ಅಫಿಲೇಟ್ ಟ್ರಿಬ್ಯೂನಲ್‌ನವರು ಹೇಳಿದ್ದಾರೆ. ಈಗ ಇದೇ ರೀತಿ ಜಾರಿಗೆ ಬರಬೇಕು ಎಂದು ಅವರು ಹೇಳಿದ್ದಾರೆ. ಅದಕ್ಕೆ ಈಗ ಈ ಒಂದು ಕಷ್ಟ ಬಂದಿರುವುದರಿಂದ ಈ ಸೀನಿಯರ್ ಅಸಿಸ್ಟೆಂಟ್ ಕ್ಯಾಟಗರಿಯಲ್ಲಿ ಸಾಕಷ್ಟು ಪ್ರಾತಿನಿಧ್ಯ ಎಸ್.ಸಿ. ಮತ್ತು ಎಸ್.ಟಿ.ಗಳಿಗೆ ಇಲ್ಲ. ಈಗ ರೂಲ್ಸ್ ಬದಲಾಯಿಸಿ ಮೂರು ವರ್ಷ

ಮಿನಿಮಮ್ ಸರ್ವೀಸ್ ಇದ್ದರೆ ಸಾಕು ಎಂದು ಮಾಡಿದ್ದಾರೆ. ಇನ್ನು ಮುಂದೆ ಇದು ಸರಿ ಹೋಗುತ್ತದೆ ಎಂದು ನಾನು ಆಶೆ ಮಾಡುತ್ತೇನೆ.

ಶ್ರೀ ಕೆ. ಕುಶಾಲ.-- ಇದನ್ನು ಎಸ್ ಸಿ. ಮತ್ತು ಎಸ್.ಟಿ. ಲೆಜಿಸ್ಲೇಚರ್ ಕಮಿಟಿಗೆ ರೆಫರ್ ಮಾಡಿದರೆ, ಇವರಿಗೆ ನ್ಯಾಯವನ್ನು ಒದಗಿಸಿಕೊಡಬಹುದು. ದಿವಂಗತ ಡಾ. ಅಂಬೇಡ್ಕರ್ ಅವರ ವರ್ಷಾಚರಣೆ ಕಾರ್ಯಕ್ರಮದಲ್ಲಿ ಇದನ್ನು ಮಾಡಬಹುದೆಂದು ಹೇಳಬಯಸುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.-- ಈಗಾಗಲೇ ನಾನು ಹೇಳಿದ್ದೇನೆ. ಇದು ಹಿಂದೆ ಆಗಿರುವಂತಹದು ಮತ್ತು ಕರ್ನಾಟಕ ಅಪಲೇಟ್ ಟ್ರಿಬ್ಯೂನಲ್‌ನಲ್ಲಿ ಇದು ನಿಗದಿ ಆಗಿದೆ. ಈ ಪ್ರಶ್ನೆ ಬಗೆಹರಿದು ಹೋಗಿದೆ. ರಿಪೀಳಿರಿಂದ ಪ್ರೊವೀಷನ್ ಸೆಲುವಾಗಿ ಮೊದಲು ಐದು ವರ್ಷ ಇದ್ದುದನ್ನು ಮೂರು ವರ್ಷಕ್ಕೆ ಇಳಿಸಲಾಗಿದೆ. ಇದನ್ನು ಮುಂದೆ ಸರಿ ಮಾಡುವಂತಹ ಪ್ರಶ್ನೆ ಇಲ್ಲ. ಹಿಂದಿನದನ್ನು ಯಾವ ರೀತಿ ಸರಿ ಮಾಡಬೇಕು ಎಂದು ನಿಮ್ಮೊತ್ತು ಹೇಳುವಂತಹ ಪರಿಸ್ಥಿತಿ ಕೂಡ ಇಲ್ಲ ..

ಶ್ರೀ ಕೆ. ಕುಶಾಲ.-- ವಿಧಾನ ಸೌಧದ ಕಛೇರಿಯಲ್ಲಿ ಈ ರೀತಿ ಆದರೆ ಇತರ ಇಲಾಖೆಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಪರಿಸ್ಥಿತಿ ಏನು ಎಂದು ಕೇಳಬಯಸುತ್ತೇನೆ.

ಅಧ್ಯಕ್ಷರು.— ಈಗ ಪ್ರಶ್ನೋತ್ತರ ಕಾಲ ಮುಗಿಯಿತು...

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚಾಮರಾಜನಗರ ತಾಲ್ಲೂಕಿನಲ್ಲಿರುವ ಕಾಲುದಾರಿಗಳಿಗೆ ಬೇಲಿ ಹಾಕಿರುವುದು

೧೬೭. ಶ್ರೀ ಎಂ. ನಾರಾಯಣಸ್ವಾಮಿ (ಚೇತಮಂಗಲ) — ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಾಮರಾಜನಗರ ತಾಲ್ಲೂಕು ಚಿಂದಕವಾಡಿ ಹೋಬಳಿ ಪುಟ್ಟಸಪುರ ಗ್ರಾಮದಲ್ಲಿರುವ ಸರ್ವೆ ನಂ. ೬, ೭,೮ ಮತ್ತು ೯ರ ಕಾಲು ದಾರಿಗಳಿಗೆ ಬೇಲಿ ಹಾಕಿರುವುದು ನಿಜವೇ?

ಆ) ಹಾಗಿದ್ದಲ್ಲಿ. ಅದನ್ನು ಎಂದಿನಿಂದ ತೆರವು ಮಾಡಿಸಲಾಗಿದೆ ಮಾಗೂ ಎಷ್ಟು ಲಿಂಕ್ ಜಾಗವನ್ನು ಓಡಾಡಲು ಬಿಡಲಾಗಿದೆ?

ಇ) ಈ ಜಾಗವನ್ನು ಈವರೆಗೆ ಒತ್ತುವರಿ ಮಾಡಿಕೊಂಡಿರುವವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ದಿನಾಂಕ ೮-೯-೧೯೮೯ರಂದು ಸದರಿ ಪ್ರದೇಶವನ್ನು ಒತ್ತುವರಿದಾರರಿಂದ ಖುಲ್ಲಾ ಮಾಡಿಸಲಾಗಿದೆ ಮತ್ತು ಜನ ಜಾನುವಾರುಗಳು ತಿರುಗಾಡುವಷ್ಟು ಜಾಗವನ್ನು ಬಿಡಿಸಲಾಗಿದೆ.

ಇ) ನಿಯಮಾನುಸಾರ ಒತ್ತುವರಿ ಪ್ರದೇಶ ಹಾಗೂ ಒತ್ತುವರಿದಾರರ ವಿರುದ್ಧ ಕ್ರಮ ಕೈಗೊಂಡಿದೆ.

ಪುತ್ತೂರು ಮಾರುಕಟ್ಟೆಗೆ ರಸ್ತೆ

೧೬೮. ಶ್ರೀ ವಿನಯಕುಮಾರ್ ಸೊರ್ಕೆ (ಪುತ್ತೂರು).— ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ಮಾರುಕಟ್ಟೆಗೆ ರಸ್ತೆಯ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಡಾ. ಹೆಚ್. ಆರ್. ರಾಜು (ಸಹಕಾರ ಮಂತ್ರಿಗಳು).—

ಅ) ಬಂದಿರುತ್ತದೆ.